**69 ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ,**
**ನ್ಯಾಯಾಂಗಣ (70), ಬೆಂಗಳೂರು**
**ಎಸ್.ಸಿ.ನಂ.1314/2014**

ಸಾಕ್ಷಿಗೆ ಪ್ರಮಾಣ ವಚನಃ ಭೋದಿಸಲಾಗಿದೆ.
ದಿನಾಂಕ:19/01/2017

ಪಿಡಬ್ಲ್ಯೂ:5
ಸಿಡಬ್ಲ್ಯೂ: 4

| | | |
|---|---|---|
| ಹೆಸರು | ಃ | ಆರ್ ವೆಂಕಟೇಶ |
| ತಂದೆಯ ಹೆಸರು | ಃ | ರಘುಪತಿ |
| ವಯಸ್ಸು | ಃ | 45ವರ್ಷಗಳು |
| ಉದ್ಯೋಗ | ಃ | ಟ್ರಾವೆಲ್ಸ್ ಏಜೆಂಟರ್ |
| ವಿಳಾಸ | ಃ | ಜಯನಗರ 7ನೇ ಬ್ಲಾಕ್, ಬೆಂಗಳೂರು. |

**ಮುಖ್ಯ ವಿಚಾರಣೆ ಮಾನ್ಯ ಪಿ.ಪಿ.ಯವರಾದ ಶ್ರೀಮತಿ ಸತ್ಯವತಿಯವರಿಂದಃ**

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿ.ಪಿ.12 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.12(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 2014ರಲ್ಲಿ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಮಾಡಿದ್ದೆ. ಆಗ ನನಗೆ 3 ಜನರನ್ನು ತೋರಿಸಿ ಒಂದು ಡೆಬಿಟ್ ಕಾರ್ಡ್ ಒಂದು ಮೊಬೈಲ್ ಹಾಗೂ ಚಾಕುವನ್ನು ಜಪ್ತುಪಡಿಸಿಕೊಂಡರು, ಅವುಗಳನ್ನು ನೋಡಿದರೆ ಗುರುತಿಸಬಲ್ಲೆ, ಪೊಲೀಸರು ನನ್ನ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ನ್ಯಾಯಾಲಯದ ಮುಂದಿರುವ ಮು.ಮಾ.2ನ್ನು ಸುತ್ತಿರುವ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಹಿಯನ್ನು ಮು.ಮಾ.2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅದೇ ಸಂದರ್ಭದಲ್ಲಿ ಮಾಡಿರುತ್ತೇನೆ. ಸಾಕ್ಷಿ ಮು.ಮಾ.2ನ್ನು ನೋಡಿ ಗುರುತಿಸಿರುತ್ತಾರೆ. ನಿ.ಪಿ.9ರ ಫೋಟೋದಲ್ಲಿರುವ ಡೆಬಿಟ್ ಕಾರ್ಡ್ ಹಾಗೂ ಮೊಬೈಲ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಆ ದಿನ ಠಾಣೆಯಲ್ಲಿದ್ದ ಹುಡುಗರನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದಿರುವ 2ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಉಳಿದವರನ್ನು ನೋಡಿದರೆ ಗುರುತಿಸಬಲ್ಲೆ.

3ನೇ ಆರೋಪಿ ಗೈರುಹಾಜರಿದ್ದು, 1 ಮತ್ತು 3ನೇ ಆರೋಪಿಯನ್ನು ಗುರುತಿಸುವ ಸಲುವಾಗಿ ಮುಂದಿನ ಮುಖ್ಯವಿಚಾರಣೆಗೆ ಮುಂದೂಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಗಿದೆ.)

ಓ.ಹೇ.ಕೇ.ಸ.ಇದೆ

**( ಟಿ.ಪಿ.ರಾಮಲಿಂಗೇಗೌಡ)**
**69ನೇ ಅಪರ ನಗರ ಸಿವಿಲ್**
**ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

**ದಿ. ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ ಮಾನ್ಯ ಪಿ.ಪಿ.ಯವರಾದ ಶ್ರೀಮತಿ ಸತ್ಯವತಿಯವರಿಂದಃ**

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಸಾರ್ವಜನಿಕ ಅಭಿಯೋಜಕರು ಅನುಮತಿಯನ್ನು ಕೋರಿದರು. ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದಃ**

ದಿ.22.06.2014ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ5ರವರನ್ನು ಠಾಣೆಗೆ ಕರೆಯಿಸಿ ತಮ್ಮ ವಶದಲ್ಲಿದ್ದ 3ಜನ ಆರೋಪಿಗಳನ್ನು ತೋರಿಸಿ ಈ ಪ್ರಕರಣದ ವಿದ್ಯಮಾನಗಳನ್ನು ತಿಳಿಸಿ, ಆರೋಪಿಗಳು ಒಬ್ಬ ವ್ಯಕ್ತಿಯನ್ನು ಅಪಹರಿಸಿ ಚಾಕುವಿನಿಂದ ಹೆದರಿಸಿ ಆತನಿಂದ ಮೊಬೈಲ್, ಡೆಬಿಟ್ ಕಾರ್ಡ್‌ಗಳನ್ನು ಕಿತ್ತುಕೊಂಡಿದ್ದು ಅವುಗಳನ್ನು ಹಾಗೂ ಚಾಕುವನ್ನು ಅಮಾನತ್ತುಪಡಿಸಬೇಕಾಗಿದ್ದು ಆವಾಗ ನೀವು ಪಂಚರಾಗಿ ಇರಬೇಕೆಂದು ಕೋರಿಕೊಂಡಿದ್ದು ನಾವು ಒಪ್ಪಿಕೊಂಡ ಮೇರೆಗೆ ನಮ್ಮ ಸಮಕ್ಷಮ ಆರೋಪಿಗಳಿಂದ ನ್ಯಾಯಾಲಯದ ಮುಂದಿರುವ ಮುದ್ದೆಮಾಲು 2 ಮತ್ತು ಚಾಕು ಮತ್ತು ನಿ.ಪಿ.9 ಫೋಟೋದಲ್ಲಿರುವ ಫೋನು ಹಾಗೂ ಡೆಬಿಟ್‌ಕಾರ್ಡನ್ನು ಪೊಲೀಸರು ನಿ.ಪಿ.12ರಂತೆ ಪಂಚನಾಮೆ ಕ್ರಮ ಜರುಗಿಸಿ, ನಿಮ್ಮಗಳ ಸಮಕ್ಷಮ ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ, ಆ

ಸಂದರ್ಭದಲ್ಲಿ ನೀವು ನಿ.ಪಿ.12 ಮತ್ತು ಮು.ಮಾ.2ರ ಮೇಲೆ ಅಂಟಿಸಿದ ಚೀಟಿಗೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿ.ಪಿ.13 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ :**

ಏನೂ ಇಲ್ಲ.

**ಮರುವಿಚಾರಣೆ:** ಇಲ್ಲ.

**(**ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಗಿದೆ.**)**

ಓ.ಹೇ.ಕೇ.ಸ.ಇದೆ

**( ಟಿ.ಪಿ.ರಾಮಲಿಂಗೇಗೌಡ)**
**69ನೇ ಅಪರ ನಗರ ಸಿವಿಲ್**
**ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**